ಲೋಕಸಭಾ ಸದಸ್ಯರು ರಾಜ್ಯಸಭಾ ಸದಸ್ಯರುಗಳನ್ನು ಕರೆದು ಅವರಿಗೆ ವಿವರವಾಗಿ ಮಾಹಿತಿಯನ್ನು ಕೊಟ್ಟು ಕೇಂದ್ರಕ್ಕೆ ಸರಿಯಾದ ತಿಳಿವಳಿಕೆ ಕೊಡಬೇಕೆಂದು ಅವರ ಸಹಕಾರವನ್ನು ಕೋರಿದ್ದೇವೆ.

ಸಿ.ಬಿ.ಐ.ಯಂವರು ಇಂಡಿಯನ್ ಎಕ್ಸ್‌ಪ್ರೆಸ್ ಕಚೇರಿ ಮೇಲೆ ದಾಳಿ ಮಾಡಿರುವ ಪ್ರಸ್ತಾಪ

ಶ್ರೀ ಸಿ. ಬೈರೇಗೌಡ (ವೇಮಗಲ್) —ಅಧ್ಯಕ್ಷರೇ ಈಗ ಮುಖ್ಯ ಮಂತ್ರಿಗಳು ಬಂದಿದ್ದಾರೆ. ಆವಾಗಲೇ ಶ್ರೀ ಜೆ. ಹೆಚ್. ಪಟೇಲರು ಅದೇನೋ ಟೆಲಿಕ್ಸ್, ಮೆಸೇಜ್ ಎಂದು ಒಂದು ವಿಷಯವನ್ನು ಸಭೆಯ ಗಮನಕ್ಕೆ ತಂದರು. ಅದರಿಂದ ನನಗೆ ತೃಪ್ತಿಯಾಗಿದ್ದರೂ ಸದನಕ್ಕೆ ತೃಪ್ತಿಯಾಗಿಲ್ಲ. ಏಕೆಂದರೆ ಇವತ್ತು ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗ ಇವುಗಳ ಜೊತೆಗೆ ಪತ್ರಿಕಾರಂಗ ಇವು ನಮ್ಮ ಸಾಧನಗಳು. ಇವತ್ತು ದೇಶಾದ್ಯಂತ ಇಂಡಿಯನ್ ಎಕ್ಸ್‌ಪ್ರೆಸ್ ಸಂಸ್ಥೆಗಳ ಮೇಲೆ ಕೇಂದ್ರದಿಂದ ಧಾಳಿ ನಡೆದಿದೆ. ಇದೇನು, ಮುತ್ತೆ ಕಪ್ಪು ದಿನಗಳು ಪುರುಕಳಿಸುತ್ತಿವೆಯೇ ? ನನ್ನನ್ನು ಪೀಡಿಸುತ್ತಿರುವ ಮಂತ್ರೊಂದು ಅಂಶವೇನೆಂದರೆ ಈ ದೇಶದಲ್ಲಿ ಅಸತ್ಯವನ್ನು ನುಡಿದರೆ ಏನು ಬೇಕಾದರೂ ಆಗಬಹುದು, ಆದರೆ ಸತ್ಯವನ್ನು ನುಡಿದರೆ ಧಾಳಿ ಹಿಂಸೆಗಳಿಗೊಳಗಾಗ ಬೇಕಾಗುತ್ತದೆ. ಈ ದೇಶದ ಉತ್ಪತ್ತಿ ಸಂಪತ್ತೆಲ್ಲ ಹೊರಗಡೆಗೆ ಹೋಗುತ್ತಿದೆ. ದೊಡ್ಡ ಪಗರಣಗಳು ಯಾವ್ಯಾವ ರೀತಿ ನಡೆಯುತ್ತಿವೆ ಎಂಬುದನ್ನೆಲ್ಲ ಇಂಡಿಯನ್ ಎಕ್ಸ್‌ಪ್ರೆಸ್ ಧೈರ್ಯವಾಗಿ ಹೇಳುತ್ತಾ ಹೋದುದರ ಫಲವೇ ಇದು ? ಪ್ರಜಾಪ್ರಭುತ್ವದ ಮೇಲೆ ಗದಾಪ್ರಹಾರವೇ ?

ಶ್ರೀ ಬಿ. ಬಸವಲಿಂಗಪ್ಪ.—ನಾನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದೇನೆ. ಈಗ ಬರಗಾಲದ ವಿಷಯದಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ಅದಕ್ಕೆ ಕಂದಾಯ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಈ ಮಧ್ಯದಲ್ಲಿ ಸನ್ಮಾನ್ಯ ಭೈರೇಗೌಡರು ಹಿಂದೆ ಏನೋ ಯಾರೋ ಮಾತನಾಡಿದರು ಎಂದು ಈಗ ಅದೇನೋ ರೇಡ್ ವಿಷಯದಲ್ಲಿ ಮಾತನಾಡುತ್ತಿದ್ದಾರೆ, ಮಾತನಾಡಲಿ ಅಭ್ಯಂತರವಿಲ್ಲ. ಆದರೆ ಯಾವ ನಿಯಮಾವಳಿಯಂ, ಯಾವ ಕಲಮಿನ ಪ್ರಕಾರ ಅವರು ಇದನ್ನು ಎತ್ತಿದ್ದಾರೆ ? ನಿಮಗೇನಾದರೂ ಪತ್ರ ಬರೆದಿದ್ದಾರೆಯೇ ? ನೋಟೀಸ್ ಕೊಟ್ಟಿದಾ ರೆಯೇ ? ಯಾವ ಆಧಾರದ ಮೇಲೆ ಅವರಿಗೆ ಮಾತನಾಡಲು ಅವಕಾಶ ಕೊಡುತ್ತಿದ್ದೀರಿ ?

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ (ಮಂಳಬಾಗಿಲಂ).—ಮಾನ್ಯ ಭೈರೇಗೌಡರು ಆಗಲೇ ಹೇಳಿದಂತೆ ಕೇವಲ ಇನ್‌ಫರ್ಮೇಶನ್‌ಗಾಗಿ ಹೇಳುತ್ತಿದ್ದೇನೆ. ಬೋಫೋರ್ಸ್ ಹಗರಣ, ಫೇರ್‌ಫ್ಯಾಕ್ಸ್ ಹಗರಣಗಳ ಬಗ್ಗೆ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ಬರೆದಿದ್ದರಿಂದ ಸೆಂಟ್ರಲ್‌ನವರು ಸಿಬಿಐ ಕೈಲಿ ಅವುಗಳ ಕಛೇರಿ ಮೇಲೆ ರೇಡ್ ಮಾಡಿಸಿ ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆಯೊಡ್ಡಿದ್ದಾರೆ. ಈಗ ಭೈರೇಗೌಡರಿಗೆ ರೆವಿನ್ಯೂ ಮಂತ್ರಿಗಳು ಯೀಲ್ಡ್ ಆಗಿದ್ದಾರೆ. ಆದ್ದರಿಂದ ಭೈರೇಗೌಡರಿಗೆ ಅವಕಾಶ ಮಾಡಿಕೊಡಬಹುದು ಮತ್ತು ಈ ಧಾಳಿಯನ್ನು ನಾವು ಖಂಡಿಸಬೇಕಾಗುತ್ತದೆ.

(ಗೊಂದಲ)

ಶ್ರೀ ಸಿ. ಬೈರೇಗೌಡ.—ಮಾನ್ಯ ಬಸವಲಿಂಗಪ್ಪನವರು...

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ಉತ್ತರ ಕೊಡುತ್ತಿದ್ದಾರೆ ಅಷ್ಟು ಹೊತ್ತಿನಿಂದ. ಮಧ್ಯದಲ್ಲಿ ಎದ್ದು ಎಲ್ಲೋ ರೈಡ್ ಆಯಿತಂತೆ..... ಎಂದರೆ ಹೇಗೆ ?

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಇಡೀ ದೇಶದ ದರೋಡೆ ನಡೆದಿದೆ ರಾಜೀವ ಗಾಂಧಿಯವರಿಂದ, ಆ ವಿಷಯ ಬರೆದಿದ್ದಾರೆಂದು ಹೇಳಿ....

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಯಾರು ಈ ಸದನದಲ್ಲಿ ಇಲ್ಲ ಅವರ ಹೆಸರು ಹೇಳಬಂಥಾದ್ದು ಸರಿಯಲ್ಲ. It has to be expunged.

(ಗೊಂದಲ)

ಚೇರ್ಮನ್.—ಮಾನ್ಯ ಬೈರೇಗೌಡರು ಪೂರ್ವಾನುಮತಿ ತೆಗೆದುಕೊಂಡು ಹೇಳಬೇಕಾಗಿತ್ತು. ಕಂದಾಯ ಸಚಿವರು ಉತ್ತರ ಕೊಡುವುದಕ್ಕಿಂತ ಮೊದಲು ಎದ್ದಿದ್ದು ನೆನಪಿದೆ. ಮಾನ್ಯ ಮುಖ್ಯ ಮಂತ್ರಿಗಳು ಆಗ ಇರಲಿಲ್ಲವೆನ್ನುವ ಕಾರಣದಿಂದ ಸುಮ್ಮನೆ ಕುಳಿತುಕೊಂಡರು. ಮಾನ್ಯ ಮುಖ್ಯ ಮಂತ್ರಿಗಳು ಬಂದರೆ ಅವರಿಂದ ಏನಾದರೂ ಅಭಿಪ್ರಾಯ ತಿಳಿಯಬೇಕೆನ್ನುವ ಭಾವನೆಯಿಂದ ಹೇಳಿದ್ದಾರೆ ಸರಕಾರದವರು ಇದಕ್ಕೆ ಉತ್ತರ ಕೊಡುವುದಿದ್ದರೆ ಕೊಡಬೇಕು, ಇಲ್ಲದಿದ್ದರೆ ಮಾನ್ಯ ಕಂದಾಯ ಸಚಿವರು ತಮ್ಮ ಉತ್ತರವನ್ನು ಮುಂದುವರಿಸಬಹುದು.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.— ತಮ್ಮ ಮುಂದೆ ಸೂಚನೆ ಏನಾದರೂ ಕೊಟ್ಟಿದ್ದಾರೆಯೇ ? ಕೊಟ್ಟಿದ್ದರೆ ಯಾವ ಕಲಮಿನ ಪ್ರಕಾರ...

(ಗೊಂದಲ)

ಶ್ರೀ ಜಿ. ನಾರಾಯಣಗೌಡರು.—ಮಾನ್ಯ ಅಧ್ಯಕ್ಷರೇ,

ಶ್ರೀ ಎಂ. ವೀರಪ್ಪ ಮೊಯಿಲಿ.—ಸ್ವಲ್ಪ ಯೀಲ್ಡ್ ಆಗಿ ತಾವು

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಅವರು ಯೀಲ್ಡ್ ಆಗಿ ಆಗಿದೆ.

ಛೇರ್ಮನ್.—ಕುಳಿತುಕೊಳ್ಳಿ ನಾನು ಎದ್ದಾಗ ಕುಳಿತುಕೊಳ್ಳುವ ಸತ್ಸಂಪ್ರದಾಯವನ್ನು ಎಲ್ಲರೂ ಅನುಸರಿಸಬೇಕು.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಮುಖ್ಯ ಮಂತ್ರಿಗಳು ಡಿಬೇಟ್‌ನಲ್ಲಿ ಇಂಟರ್‌ವಿನ್ ಆಗತಕ್ಕಂತಹ ಹಕ್ಕು ಇದೆ ಅವರು ಇಂಟರ್‌ವಿನ್ ಆಗಲೀ ಅದಕ್ಕೆ ಅಡ್ಡಿ ಇಲ್ಲ. ನಾವು ಆತಂಕ ಮಾಡುತ್ತಿಲ್ಲ. ಮಾನ್ಯ ಸದಸ್ಯರು ಚರ್ಚೆಯ ಮಧ್ಯದಲ್ಲಿ ಎದ್ದುನಿಂತು ತಮ್ಮ ಅನುಮತಿಯ ಪ್ರಕಾರ ಇಂಟರ್‌ವಿನ್ ಆದರೆ ನಾವು ಅಡ್ಡಿ ಬರುವುದಿಲ್ಲ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು ಸಿ.ಬಿ.ಐ. ರವಿನ್ಯೂ ಇಂಟಲಿಜೆನ್ಸ್.....

(ಗೊಂದಲ)

ಚೇರ್ಮನ್.—ಆದರ ಬಗ್ಗೆ ಈಗ ವಾದ ವಿವಾದ ಬೇಡ.

ಶ್ರೀ ಎಂ. ವೀರಪ್ಪ ಮೊಯಿಲಿ.— ಇದರ ಬಗ್ಗೆ ಅವರು ನೋಟೀಸ್ ಏನಾದರೂ ಕೊಟ್ಟಿದ್ದಾರೆಯೇ ? ವಿಧಾನ ಸಭೆಯ ರಾಜ್ಯ ಸರಕಾರದ ಕಕ್ಷೆಯಲ್ಲಿ ಈ ವಿಚಾರ ಬರುತ್ತದೆಯೇ ? ಇದು ಎಕನಾಮಿಕ್ ಆಫೆನ್ಸ್‌ಗೆ ಸಂಬಂಧಪಟ್ಟಿರುವುದು. ರೆವಿನ್ಯೂ ಇಂಟಲಿಜೆನ್ಸ್ ರೈಡ್ ಮಾಡಿದ್ದು ಸರಿಯೋ ಇಲ್ಲವೋ ಅದಕ್ಕೆ ಸಂಪ್ರೀಂ ಕೋರ್ಟ್ ಇದೆ ನ್ಯಾಯಾಲಯ ಇದೆ. ಅದಕ್ಕೆ ಬೇಕಾದಂತಹ ಪ್ರತ್ಯೇಕ ನ್ಯಾಯಾಲಯ ಇದೆ. ರಾಜ್ಯ ಸರಕಾರದ ಕಕ್ಷೆಯಲ್ಲಿ ಇದು ಬರುವುದಿಲ್ಲ.

(ಗೊಂದಲ)

ಶ್ರೀ ಜಿ. ನಾರಾಯಣಗೌಡರು.—ಮಾನ್ಯ ಅಧ್ಯಕ್ಷರೇ,.....

ಶ್ರೀ ಎಂ. ವೀರಪ್ಪ ಮೊಯಿಲಿ.—ರೆವಿನ್ಯೂ ಇಂಟಲಿಜೆನ್ಸ್ ರೈಡ್ ಮಾಡಿದ್ದನ್ನು ಚರ್ಚೆ ಮಾಡಲು ಈ ಸದನವನ್ನು ಉಪಯೋಗ ಮಾಡುವುದಿದ್ದರೆ ಅದರಿಂದ ಕರ್ನಾಟಕ ರಾಜ್ಯದ ಸಂಸದೀಯ ಇತಿಹಾಸಕ್ಕೇ ಕುಂದು ಉಂಟಾಗುತ್ತದೆ. ಈ ಸದನವನ್ನು ಎಕನಾಮಿಕ್ ಆಫೆಂಡರ್ಸ್ ಪರವಾಗಿ ವಾದ ಮಾಡಲಿಕ್ಕೆ ಉಪಯೋಗ ಮಾಡತಕ್ಕಂಥಾದ್ದಕ್ಕೆ ಅವಕಾಶ ಮಾಡಿಕೊಡಬಾರದೆಂದು ವಿನಂತಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ.....

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಪಟೇಲರು ಏನು ಹೇಳಿದರು ಎಂದರೆ, ಟೆಲೆಕ್ಸ್ ಬಂದಿದೆ.....ಈ ರೀತಿ ರೈಡ್ ಆಗಿದೆ ಎಂದು ಹೇಳುತ್ತಾರೆ. ಯಾವುದು ಏನು ರೈಡ್ ಆಯಿತು ಎಂದು ಹೇಳಬೇಕು.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ನಾನು ಈ ವಿಚಾರದಲ್ಲಿ ಯಾವುದೇ ಹೇಳಿಕೆಯನ್ನು ಕೊಡಲಿಕ್ಕೆ ಬಯಸುವುದಿಲ್ಲ. ಮಾನ್ಯ ಮೊಯಿಲಿಯವರು ಹೇಳಿದ ಹಾಗೆ ಈ ವಿಚಾರ ಕೇಂದ್ರ ಸರ್ಕಾರದವರು ತೆಗೆದುಕೊಂಡಂಥ ಕ್ರಮಕ್ಕೆ ಸಂಬಂಧಪಟ್ಟಿರತಕ್ಕಂಥದ್ದು ಆದರೆ ನಮಗೆ ಏನು ಸಮಾಚಾರ ಸಿಕ್ಕಿದೆಯೋ, ಆ ಸಮಾಚಾರ ಇಲ್ಲಿ ತಿಳಿಸಲಿಕ್ಕೆ ಬಯಸುತ್ತೇನೆ. ಇಲ್ಲಿ ಅವರು ಕೇಳಿದರು.....ಇದು ನಮ್ಮ ರಾಜ್ಯದಲ್ಲಿಯೇ ಅಲ್ಲದೆ ನಮ್ಮ ರಾಜಧಾನಿಯಲ್ಲಿ

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಅಧ್ಯಕ್ಷರೇ.....

ಛೇರ್ಮನ್.—ತಾವು ಕುಳಿತುಕೊಳ್ಳಿ ಸ್ವಾಮಿ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ನಮ್ಮ ರಾಜ್ಯದ ರಾಜಧಾನಿಯಲ್ಲಿ ಒಂದು ಪ್ರಾಮುಖ್ಯವಾದ ಪತ್ರಿಕಾ ಆಫೀಸಿನ ಮೇಲೆ ಧಾಳಿ ಆಯಿತು ಇದು ಮಾನ್ಯ ಸದಸ್ಯರಿಗೆ ಒಂದು ಕುತೂಹಲ ಆಷ್ಟೇ ಅಲ್ಲ. ಇದು ಚಿಂತೆಯ ಪ್ರಶ್ನೆ. ನಾಳೆ ಬೆಳಿಗ್ಗೆ ಆ ಪತ್ರಿಕೆ ಸಿಗುತ್ತದೆಯೋ ಇಲ್ಲವೋ ಎನ್ನುವ ಪ್ರಶ್ನೆ. ಸದನದಲ್ಲಿ ಸದಸ್ಯರ ಹಕ್ಕು ಕೂಡಾ ಆಷ್ಟೇ ಮಹತ್ವವಾಗಿದೆ. ಮಾನ್ಯ ವೀರಪ್ಪ ಮೊಯಿಲಿಯವರು ಗಾಢವಾದಂಥ ವಿಚಾರವನ್ನು ಎತ್ತಿದರು. ಎಕಾನಾಮಿಕ್ ಅಫೆನ್ಸ್ ಆಗಿರಬಹುದು ಎಂದು ಹೇಳಿದರು. ಮಾನ್ಯ ವಿರೋಧ ಪಕ್ಷದ ನಾಯಕರೂ ಹೇಳಿದರು.....

(ಗೊಂದಲ)

ಟಾಟಾ ಆಗಲೀ ಬಿರ್ಲಾ ಆಗಲೀ ಈ ಪತ್ರಿಕೆ ನಡೆಸುವುದಿಲ್ಲ. ಸ್ವಾತಂತ್ರ್ಯ ಸಮರದಲ್ಲಿ ಅವರು ಭಾಗವಹಿಸಿದ್ದರು, ಅವರು ಜೈಲಿನಲ್ಲಿಯೂ ಇದ್ದರು. ಎರಡು ಸಲ ಪಾರ್ಲಿಮೆಂಟ್ ಸದಸ್ಯರೂ ಕೂಡಾ ಆಗಿದ್ದವರು. ಇಂಡಿಯನ್ ಎಕ್ಸ್‌ಪ್ರೆಸ್ ಮೇಲೆ ಧಾಳಿ ನಡೆದಿಸುವುದು.

ಇದು ಮೊದಲನೇ ಸಲ ಅಲ್ಲ. ಕನಿಷ್ಟ ಆರು ಸಲ ಆಗಿದೆ. ಪತ್ರಿಕಾ ಸ್ವಾತಂತ್ರ್ಯದ ಮೇಲೆ ದಾಳಿ ಆಗಿದೆ.

(ಗೊಂದಲ)

ನಾಳೆ ಪುನ್ಹೊಂದರ ಮೇಲೆ ಆಗುತ್ತದೆ.

(ಈ ಸಮಯದಲ್ಲಿ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು)

SRI B. BASAVALINGAPPA.—This is not correct. If he wants to make a statement, let it go on record, let them be recorded here, As long as people tolerate you, you can run the government. This is not the way. You are not caring for the porduecre. You are the custodian, and protector of the procedures of this House. You do not allow the procedure. Hon'ble Minister is replying for the discussion

on Scarcity condition. At this juncture you want to make a record of it. Very bad, very bad.

(ಗೊಂದಲ)

You can talk anything. You have got freedom to tell anything. is this the way ? Is it a freedom ? .....

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಅವರಿಗೆ ಕೇಳತಕ್ಕಂಥ ವ್ಯವಧಾನ ಇಲ್ಲ ಪ್ರಜಾ ಪ್ರಭುತ್ವದ ಮೇಲೆ ವಿಶ್ವಾಸ ಇಲ್ಲ. ಮೂಲಭೂತವಾಗಿ ಸ್ವಾತಂತ್ರ್ಯದ ಮೇಲೇ ಅವರಿಗೆ ವಿಶ್ವಾಸ ಇಲ್ಲ. ಇವತ್ತೇ ಇದು ಮೊದಲನೇ ಸಲ ಅಲ್ಲ.....

(ಗೊಂದಲ)

ಇದು ಎಮರ್ಜೆನ್ಸಿ ಪೂರ್ವ ಪೀಠಿಕೆ ಆಗಿದೆಯೆಂದು ಅನೇಕ ಜನರಿಗೆ ಭಯವಾಗಿದೆ. ಸಂದೇಹ ಆಗಿದೆ. ಇದು ಮೊದಲನೇ ಸಲ ಅಲ್ಲವೆಂದು ನಾನು ಆಗಲೇ ಹೇಳಿದ್ದೆ. ಅಲ್ಲಿ ಬರೆದಿರತಕ್ಕಂಥ ಲೇಖನಗಳ ಒಂದು ಮಾಲೆಯ ಮೇಲೆ ಗುರುಮೂರ್ತಿ ಮೇಲೆ ದಾಳಿ ಆಯಿತು. ಅವರೇನು ಎಕನಾಮಿಕ್ ಅಫೆನ್ಸ್ ಮಾಡಿದರೇ ? ಅವರು ಮಾಡಿರತಕ್ಕಂಥ ಅಪರಾಧವಾದರೂ ಏನು ?

ಯಾವ ಒಂದು ಇಂಡಸ್ಟ್ರಿಯಲ್ ಹೌಸ್ ಮುಖಾಂತರ ನಮ್ಮ ದೇಶದ ೩೦೦, ೪೦೦ ಕೋಟಿ ರೂಪಾಯಿಗಳು ಫಾರೀನ್ ಎಕ್ಸ್‌ಛೇಂಜ್‌ನಲ್ಲಿ ಮೋಸ ಆಯಿತು. ಇದನ್ನು ಹೊರಗೆಳೆದು ಸತ್ಯ ಸಂಗತಿಯನ್ನು ಓಪನ್ ಆಗಿ ಮಾಡಿದ್ದಕ್ಕಾಗಿ ಅವರ ಮೇಲೆ ರೈಡ್ ಮಾಡುವುದು, ಅವರ ಮೇಲೆ ದೌರ್ಜನ್ಯ ಮಾಡಿರುವುದನ್ನು ನೋಡಿದರೆ ಪತ್ರಿಕಾ ಸ್ವಾತಂತ್ರ್ಯ ಇದೆಯೇ ಎನ್ನುವ ಅನುಮಾನ ಬರುತ್ತದೆ. ಇವರು ಹಾಜಿ ಮಸ್ತಾನ್ ಮನೆ ಮೇಲೆ ಧಾಳಿ ಮಾಡಿದ್ದಾರೆಯೇ ? ವಾಸ್ತವವಾದ ವಿಷಯವನ್ನು ಹೇಳಿಕೆ ಕೊಟ್ಟಿದ್ದಕ್ಕಾಗಿ ಅದನ್ನು ಎದುರಿಸತಕ್ಕ ನೈತಿಕ ಹಕ್ಕು ಇಲ್ಲದೆ ಇಂತಹ ಕೆಲಸ ಮಾಡಿರುವುದನ್ನು ನಾನು ಖಂಡಿಸುತ್ತೇನೆ. ಈ ಪೊಲಿಟಿಕಲ್ ವೆಂಡೆಟ್ ಏನಂ ಇದೆ, ಅದನ್ನು ನಾನು ಖಂಡಿಸಂತ್ತೇನೆ. ನಿನ್ನೆಯವರೆಗೆ ಪಾರ್ಲಿಮೆಂಟ್ ಸೆಷನ್ ಇತ್ತು. ಪಾರ್ಲಿಮೆಂಟ್ ನಡೆಯುವಾಗ ಇದನ್ನು ಮಾಡಲಂ ಅವರಿಗೆ ಧೈರ್ಯ ಇರಲಿಲ್ಲ. ಪಾರ್ಲಿಮೆಂಟ್ ಮುಗಿದ ಕೂಡಲೇ ಇದನ್ನು ಮಾಡಿದ್ದಾರೆ. ಇದನ್ನು ಈ ಮನೆ ಖಂಡಿಸುತ್ತದೆ. ರಾಜಕೀಯದ ದೃಷ್ಟಿಯಿಂದ ಮಾಡಿರತಕ್ಕ ಈ ಕ್ರಮ ಪ್ರಜಾಪ್ರಭುತ್ವದ ವಿರುದ್ಧ ಮಾಡಿರುವ ಕ್ರಮ ಮತ್ತು ಮೂಲಭೂತವಾಗಿ ಹಕ್ಕುಗಳನ್ನು ಕೊಂಡು ಕೊಳ್ಳತಕ್ಕ, ಕಿತ್ತು ಕೊಳ್ಳತಕ್ಕ ಕ್ರಮವಾಗಿದೆ ಎಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಈ ವಿಷಯದ ಬಗ್ಗೆ ಎಲ್ಲಾ ಮಾತುಗಳನ್ನು ಮಂಡಿಸಿದ್ದಾರೆ. ಇದರ ಬಗ್ಗೆ ನಾನು ವ್ಯಾಖ್ಯಾನ ಮಾಡಬೇಕಾಗಿಲ್ಲ. ನಾನೂ ಕೂಡ ಈ ಕ್ರಮವನ್ನು ತೀವ್ರವಾಗಿ ಖಂಡಿಸುತ್ತೇನೆ. ಈ ರೀತಿ ದಾಳಿ ನಡೆಯುತ್ತಿರುವುದು ಪ್ರಜಾಪ್ರಭುತ್ವದ ಮೇಲೆ, ಪತ್ರಿಕಾ ಸ್ವಾತಂತ್ರ್ಯದ ಮೇಲೆ. ಎಷ್ಟು ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬುದನ್ನು ಈ ಪತ್ರಿಕೆ ಬಹಿರಂಗ ಮಾಡಿದ ಮೇಲೆ, ಈ ಪತ್ರಿಕೆಯ ಮೇಲೆ ಬಹಿರಂಗವಾಗಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಕ್ರಮ ತೆಗೆದುಕೊಂಡಿರುವ ಬಗ್ಗೆ ನಾನೂ ತೀವ್ರವಾಗಿ ಖಂಡಿಸುತ್ತೇನೆ. ಇದರ ಅರ್ಥ ಪತ್ರಿಕಾ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿದ ಹಾಗೆ ಆಗುತ್ತದೆ. ಇವೊತ್ತು ಅವರಿಗೆ ಆಗಿರಬಹುದು, ನಾಳೆ ನಮಗೆ ಆಗಬಹುದು. ನಾವು ಯಾರೂ ಮಾತನಾಡುವ ಹಾಗೆ ಇಲ್ಲ. ಆದುದರಿಂದ ನಾನು ಒಂದು ಸೂಚನೆ ಕೊಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ರಾಜಕೀಯವಾಗಿ ಇದರ ಬಗ್ಗೆ ಒಂದು ಪೋಷನ್ ತಂದು ಈ ಮನೆಯಲ್ಲಿ ಇದನ್ನು ಖಂಡಿಸಬೇಕು. ಆವರು ಈಗ ಇಲ್ಲಿ ಯಾರೂ ಇಲ್ಲ. ನಾಳೆ ಮೋಷನ್ ತಂದಿರಂವುದು ನಮಗೆ ಗೊತ್ತಿಲ್ಲ, ಎನ್ನುವುದಕ್ಕೆ ಅವಕಾಶ ಬೇಡ. ಒಂದು ಮೋಷನ್ ನಾಳೆ ತಂದು ಈ ಬಗ್ಗೆ ಮಾತನಾಡಿ ತೀರ್ಮಾನ ಮಾಡಬಹುದು. ನಾಳೆ ಚರ್ಚೆ ಮಾಡಿದರೆ ಅವರು ಏನು ಉತ್ತರ ಹೇಳುತ್ತಾರೆಂದು ಗೊತ್ತಾಗುತ್ತದೆ. ಏಕೆಂದರೆ ಇದು ಎಲ್ಲರಿಗೂ ಗೊತ್ತಾಗಬೇಕು. ಇದು ಎಲ್ಲರಿಗೂ ಸಂಬಂಧಪಟ್ಟ ಪ್ರಶ್ನೆ. ವಾಕ್ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯ ಎಲ್ಲರ ಹಕ್ಕು. ಆದುದರಿಂದ

ನಾಳೆ ಇದರ ಬಗ್ಗೆ ಒಂದು ಬೋಷನ್ ತಂದು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡು ನಾನು ಅವರ ಈ ಕ್ರಮವನ್ನು ಖಂಡಿಸುತ್ತೇನೆ.

† ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದ ಕ್ರಮ ಪ್ರಜಾ ಪ್ರಭುತ್ವಕ್ಕೆ ವಿರುದ್ಧವಾದುದು. ಸಬ್‌ಮರೀನ್, ಡೀಲ್, ಬೋಫಾರ್ಸ್ ಎಲ್ಲಾ ಹಗರಣಗಳು ದೇಶಕ್ಕೇ ಮಾಡಿದ ಮೋಸ. ಇದರ ಬಗ್ಗೆ ವಿಚಾರಣೆಗಾಗಿ ಶ್ರೀ ಶಂಕರಾನಂದರ ಕಮಿಟಿ ಮಾಡಿದ್ದಾರೆ. ಇದರ ಬಗ್ಗೆ ಶ್ರೀ ರಾಮ್ ಜೇಠ್ಮಲಾನಿ ಪೀರೀಸ್ ಆಫ್ ಲೆಟರ್ಸ್ ಬರೆದಿದ್ದಾರೆ. ಇವೊತ್ತು ಆ ಪತ್ರಿಕೆಯ ಮೇಲೆ ರೈಡ್, ಅದೂ ಸಿ. ಬಿ. ಐ. ರೈಡ್ ಆಗಿದೆ. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ಮೇಲೆ ಸಿ. ಬಿ. ಐ. ಧಾಳಿ ಆಗಿದೆ, ಲವಿನ್ಯೂ ಇಂಟೆಲಿಜೆನ್ಸ್‌ನವರು ರೈಡ್ ಮಾಡಿದ್ದಾರೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಅವರ ಈ ದಾಳಿಯಂ ಕ್ರಮದಿಂದ ಪತ್ರಿಕಾ ಸ್ವಾತಂತ್ರ್ಯವನ್ನು ಹೊಟಕುಗೊಳಿಸಿದ ಹಾಗೆ ಆಗುತ್ತದೆ. ಇದನ್ನು ತಡೆಗಟ್ಟದಿದ್ದರೆ ಪ್ರಜಾಪ್ರಭುತ್ವ ಉಳಿಯುತ್ತದೋ ಇಲ್ಲವೋ ಅದನ್ನು ನಾವು ನೋಡಬೇಕು. ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ ಪತ್ರಿಕಾ ಬಾಶ್ಮೀದಾರರನ್ನು ೬-೬ ದಿನ ಜೈಲಿಗೆ ಹಾಕಿದ್ದಾರೆ. ಇಂಡಿಯನ್ ಎಕ್ಸ್‌ಪ್ರೆಸ್ ಪೇಪರ್ಸ್ ಅನ್ನು ಮಂಗಸಬೇಕು ಎಂದು ಒಂದು ಸಂಚನ್ನು ಸಹ ಹೂಡಿದ್ದಾರೆ.

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಆದರೂ ಸಹ ಅದು ಉಳಿದುಕೊಂಡು ಬಂತು. ಈಗ ಮತ್ತೆ ಪ್ರಧಾನಿಯವರು ಮಾಡುತ್ತಿರುವ ಕೆಲವು ಅನ್ಯಾಯಗಳನ್ನು ಬಹಿರಂಗಪಡಿಸಿದ್ದಕ್ಕೆ ಮತ್ತು ಕಾಂಗ್ರೆಸ್ ಪಾರ್ಟಿಯವರು ಹೋಗುತ್ತಿರುವ ದಾರಿ ಸರಿಯಲ್ಲ ಎಂದು ಇಡೀ ಪ್ರಪಂಚಕ್ಕೆ ತೋರಿಸಿದಕ್ಕೆ ಈ ಪತ್ರಿಕೆಯ ಮೇಲೆ ಇಂತಹ ಒಂದು ಆಪಾದನೆ ಮಾಡಿದ್ದಾರೆ. ಈ ಪತ್ರಿಕಾ ಕಛೇರಿಗಳ ಮೇಲೆ ನಡೆದಿರುವಂತಹ ರೈಡ್ ಅನ್ನು ನಾವು ಖಂಡನೆ ಮಾಡಬೇಕು. ಇಲ್ಲದಿದ್ದರೆ ನಾವು ಪ್ರಜಾಪ್ರಭುತ್ವವಾದಿಗಳಾಗುವುದಿಲ್ಲ ಇದಕ್ಕೆ ಸಂಬಂಧಪಟ್ಟಂತೆ ನಾವು ಇಲ್ಲಿ ಒಂದು ನಿರ್ಣಯವನ್ನು ತಂದು ಪಾಸ್ ಮಾಡಬೇಕು. ಇಂತಹ ಒಂದು ಕೆಟ್ಟ ಪ್ರವೃತ್ತಿಯನ್ನು ಕೈಬಿಡಿ ಎಂದು ನಾವು ಈ ಸದನದ ಮೂಲಕ ಕೇಂದ್ರ ಸರ್ಕಾರಕ್ಕೆ ಹೇಳಬೇಕಾಗುತ್ತದೆ. ಪತ್ರಿಕಾ ಸ್ವಾತಂತ್ರ್ಯವನ್ನು ಉಳಿಸಬೇಕೆಂದು ನಾವು ಅವರಿಗೆ ಹೇಳಬೇಕು. ಇಲ್ಲಿ ನಾವು ಶ್ರೀ ರಾಜೀವ್‌ಗಾಂಧಿ ಅವರ ಹೆಸರನ್ನು ಇಲ್ಲವೇ ಕೇಂದ್ರ ಸರ್ಕಾರದ ಹೆಸರನ್ನು ಪ್ರಸ್ತಾಪ ಮಾಡಿದ ಕೂಡಲೇ ಕಾಂಗ್ರೆಸ್ ಪಕ್ಷದ ಸದಸ್ಯರು ಸಭೆಯಿಂದ ಓಡಿ ಹೋಗಿದ್ದಾರೆ ಕೇಂದ್ರ ಸರ್ಕಾರದ ಈ ನೀತಿಯನ್ನು ನಾವು ಖಂಡಿಸಲೇ ಬೇಕು. ಇಲ್ಲದಿದ್ದರೆ ನಾಳೆದಿವಸ ನಮಗಿರುವಂತಹ ಸ್ವಾತಂತ್ರ್ಯವೂ ಸಹ ಉಳಿಯುವುದಿಲ್ಲವೆಂದು ಹೇಳುತ್ತೇನೆ ಈ ಎಲ್ಲಾ ಕಾರಣಗಳಿಂದ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದನ್ನು ನಾನು ಸಮರ್ಥನೆ ಮಾಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ — ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷ್ಣನ್ ಅವರು ಮತ್ತು ಮಾನ್ಯ ವೆಂಕಟರಾಮಯ್ಯನವರು ಈ ವಿಷಯಕ್ಕೆ ಸಂಬಂಧಪಟ್ಟಂತೆ ಫಾರ್ಮಲ್ ಆಗಿ ಒಂದು ನಿರ್ಣಯವನ್ನು ತೆಗೆದುಕೊಂಡು ಬನ್ನಿ ಎಂದು ಸಲಹೆ ಮಾಡಿದರು ಆದರೆ ಈಗ ಸಭ್ಯಕ್ಕೆ ಅವರ ಅಗತ್ಯವಿಲ್ಲ ಈಗ ಈ ಬಗ್ಗೆ ಇಲ್ಲಿ ಏನು ವ್ಯಕ್ತ ಆದೆಯೋ ಅಷ್ಟು ಸಾಕು ಈ ವಿಚಾರವನ್ನು ಪತ್ರಿಕೆಗಳ ಮುಖಾಂತರ ಜನತೆಗೆ ತಿಳಿಸುವುದು ಅಗತ್ಯವಾಗಿದೆ. ನಾವು ಇಲ್ಲಿ ಪ್ರಸ್ತಾಪ ಮಾಡಿದ್ದು ಕೇಂದ್ರ ಸರ್ಕಾರದ ಗಮನಕ್ಕೂ ಸಹ ಹೋಗುತ್ತದೆ. ಯಾವುದೇ ಒಬ್ಬ ವ್ಯಕ್ತಿ ಆಗಲೀ ಯಾವುದೇ ಒಂದು ಸಂಸ್ಥೆ ಆಗಲೀ, ತಪ್ಪು ಮಾಡಿದರೆ, ತಪ್ಪು ಮಾಡಿದವರ ಮೇಲೆ ಕ್ರಮ ಕೈಗೊಳ್ಳಬಾರದು ಎಂದು ಹೇಳುವವರು ನಾವಲ್ಲ. ಆದರೆ ಇಲ್ಲಿನ ಉದ್ದೇಶ ಏನಿದೆ ಎಂದರೆ, ಯಾರಾದರೂ ಇನ್ನು ಮುಂದೆ.....

ಶ್ರೀ ಎಂ.ಎಸ್. ಕೃಷ್ಣನ್.— ಒಳಗಿಂದೊಳಗೇ ಅವರವರೇ ಸೇರಿಕೊಂಡರು ಈ ಬಗ್ಗೆ ಏನೋ ಒಂದು ತೀರ್ಮಾನ ಮಾಡಿಕೊಂಡರೂ ಎಂದು ನಾಳೆ ದಿವಸ ಕಾಂಗ್ರೆಸ್ ಪಕ್ಷದವರು ಹೇಳಬಹುದು. ಆದ್ದರಿಂದ ಈ ಬಗ್ಗೆ ಅಧಿಕೃತವಾಗಿ ಒಂದು ನಿರ್ಣಯ ತೆಗೆದುಕೊಂಡು ಬನ್ನಿ. ಅದರ ಮೇಲೆ ನಾವೆಲ್ಲರೂ ಬಹಿರಂಗವಾಗಿ ಚರ್ಚೆ ಮಾಡೋಣ, ಇದು ಇಡೀ ದೇಶಕ್ಕೆ ತಿಳಿಯಲಿ.

ಶ್ರೀ ರಾಮಕೃಷ್ಣ ಹೆಗಡೆ.— ಇದು ಒಂದು ರೀತಿಯಲ್ಲಿ ಸೇಡಿನ ಕ್ರಮ ಅಷ್ಟೇ ಅಲ್ಲ, ಬಾಕಿ ಪತ್ರಿಕೆಗಳಿಗೂ ಸಹ ಚೇಳೋ ಕೆಎಂದು ಎಚ್ಚರಿಕೆ ಕೊಡುವಂತೆ ಕಾಣುತ್ತಿದೆ. ಈ ಮೊದಲು ಹಿಂದೂ ಪತ್ರಿಕೆಯಲ್ಲಿ ಡಿಫೆನ್ಸ್ ಸೆಕ್ರಟರಿ ಮತ್ತು ಎಟ್.ಡಬ್ಲ್ಯೂ.ಡಿ ಸೆಕ್ರೆಟರಿ ಅವರ ಮಧ್ಯೆ ನಡೆದಂಥ ಕರಸ್

ಫಾಂಡೆನ್ಸ್ ಕಾಪೀಸನ್ನು ಪ್ರಕಟಮಾಡಿದರು. ಇದರಲ್ಲಿ ಭಾರತ ಸರ್ಕಾರದ ರಕ್ಷಣಾ ಸಚಿವಾಲಯದ ಕಾರ್ಯದರ್ಶಿಯವರು ನಮಗೆ ಏಳು ಪರ್ಸೆಂಟ್ ಕಮಿಷನ್ ಕೊಡಬೇಕು, ಇದಕ್ಕೆ ನೀವು ಒಪ್ಪಿಕೊಳ್ಳಬೇಕು ಎಂದು ಅರ್ಥ ಬರುವ ರೀತಿಯಲ್ಲಿ ಪತ್ರ ಬರೆದಿದ್ದಾರೆ. ಈ ಒಂದು ಕಮಿಷನ್ ವ್ಯವಹಾರ ನೋಡಿದಾಗ ಕೇಂದ್ರ ಸರ್ಕಾರ ಫಾರ್ಮಲ್ ಆಗಿ ಈ ಕೆಲಸ ಮಾಡಿದೆ ಎಂದು ಅರ್ಥವಾಯಿತು. ಇದಕ್ಕಿಂತ ನಾಚಿಕೆಗೇಡಿನ ಪ್ರಕರಣ ಬೇರೆ ಇಲ್ಲ. ಹಿಂದೂ ಪತ್ರಿಕೆಯಲ್ಲಿ ಈ ಪತ್ರ ಪ್ರಕಟವಾಗಿದ್ದರಿಂದ ನಾಳೆ ದಿವಸ ಆ ಪತ್ರಿಕಾ ಕಛೇರಿಯ ಮೇಲಾಗಲಿ ಸಹಿ ರೈಡ್ ಮಾಡಬಹುದು. ಯಾರು ಕೇಂದ್ರ ಸರ್ಕಾರದ ಬಗ್ಗೆ ಒಂದು ಟೀಕೆ ಮಾಡುತ್ತಾರೆ, ಯಾರು ಅದರ ವಿರುದ್ಧ ಒಂದು ಮಾತನ್ನು ಹೇಳುತ್ತಾರೆ. ಅಂತಹವರು ಸುರಕ್ಷಿತವಾಗಿರುವುದಿಲ್ಲವೆಂಬ ಭಾವನೆ ಈ ಪ್ರಕರಣದಿಂದ ಹುಟ್ಟುತ್ತದೆ. ಶ್ರೀ ವಿ.ಪಿ. ಸಿಂಗ್ ಅವರು ಮತ್ತು ಶ್ರೀ ಆರೀಫ್ ಅಹಮದ್ ಖಾನ್‌ಅವರು ಕಾಂಗ್ರೇಸ್ ಪಕ್ಷವನ್ನು ಬಿಟ್ಟ ಕೂಡಲೇ ದೇಶದ್ರೋಹಿಗಳಾದರು. ಇಂತಹವರ ಮೇಲೆ ಹಲ್ಲೆ ಆಗುತ್ತದೆ ಶ್ರೀ ವಿ.ಪಿ.ಸಿಂಗ್ ಅವರ ಕಾರಿನ ಮೇಲೆ ಹಲ್ಲೆ ಆಗುತ್ತದೆ. ಅವರ ಅಂಗರಕ್ಷಕರ ಮೂಳೆಯನ್ನು ಮುರಿಯಲಾಯಿತು. ಇದನ್ನೆಲ್ಲಾ ನೋಡಿದಾಗ ನಾವೇನಾದರೂ ಸರ್ವಾಧಿಕಾರದ ಆಡಳಿತದಲ್ಲಿದ್ದೇವೋ ಏನೋ ಎಂಬುದು ನನಗೆ ಅರ್ಥವಾಗುವುದಿಲ್ಲ. ಈಗ ಇಲ್ಲಿ ಹಾಜರಿರುವಂಥ ಎಲ್ಲಾ ಸದಸ್ಯರ ಒಮ್ಮತದ ಅಭಿಪ್ರಾಯ ಏನೆಂದರೆ, ಈ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಮೇಲೆ ತೆಗೆದುಕೊಂಡ ಕ್ರಮ ಇದು ಖಂಡನೀಯವಾದುದು, ರಾಜಕೀಯ ಉದ್ದೇಶಕ್ಕೋಸ್ಕರ ಮಾಡಿದಂಥ ಕ್ರಮ ಹಾಗೂ ಅವರ ಮೇಲೆ ಸೇಡನ್ನು ತೀರಿಸಿಕೊಳ್ಳುವಂತಹ ಕ್ರಮವಾಗಿದೆ. ಇದು ಪತ್ರಿಕಾ ಸ್ವಾತಂತ್ರ್ಯದ ಮೇಲೆ ಪ್ರಬಲವಾದಂಥ ಗದಾ ಪ್ರಹಾರವಾಗಿದೆ. ಇದನ್ನು ನಾವು ಖಂಡಿಸುತ್ತೇವೆ ಎಂದು ನಾನು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ. — ಮಾನ್ಯ ಅಧ್ಯಕ್ಷರೇ, ನಾನು ಬರಗಾಲದ ಬಗ್ಗೆ ಉತ್ತರ ಹೇಳುತ್ತಿದೆ. ಈ ಬರಗಾಲ ಕಾಮಗಾರಿ ಕೆಲಸಗಳ ಬಗ್ಗೆ ಯಾವಾಗಲೂ ರಾಜಕೀಯ ಸೇರಿಸದೆ ಎಲ್ಲ ಪಕ್ಷಗಳ ಒಂದು ಸಹಕಾರವನ್ನು ಮತ್ತು ಎಲ್ಲರ ಸಲಹೆಗಳನ್ನು ನಾನು ಮೊದಲಿನಿಂದಲೂ ಪಡೆದುಕೊಳ್ಳುತ್ತಾ ಬಂದಿದ್ದೇನೆ. ಈ ಹಿಂದೆ ಶ್ರೀಮಾನ್ ಖಾರ್ಗೆ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತು ಆ ಸಮಿತಿಯವರು ಇಡೀ ರಾಜ್ಯಾದ್ಯಂತ ಪ್ರವಾಸ ಮಾಡಿ ಸರ್ಕಾರಕ್ಕೆ ಒಂದು ವರದಿ ಕೊಟ್ಟಿದ್ದಾರೆ.

ಶ್ರೀ ಎಂ ಎಸ್ ಕೃಷ್ಣನ್.— ಈಗ ವಿರೋಧ ಪಕ್ಷದವರೆಲ್ಲಾ ಸಭೆಯಿಂದ ಹೊರಗಡೆ ಹೋಗಿದ್ದಾರೆ. ಈಗ ನಾವು ೨-೩ ಜನ ಮಾತ್ರ ಇಲ್ಲಿದ್ದೇವೆ. ಆದ್ದರಿಂದ ಮಾನ್ಯ ಮಂತ್ರಿಗಳು ನಾಳೆ ಬೆಳಿಗ್ಗೆ ಉತ್ತರ ಕೊಡಬಹುದೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್ ಆರ್. ಬೊಮ್ಮಾಯಿ. — ನಾನು ನಾಳೆ ದೆಹಲಿಗೆ ಹೋಗಬೇಕಾಗಿದೆ.

ಶ್ರೀ ಎಂ. ರಘುಪತಿ. — ವಿರೋಧಪಕ್ಷದವರಿಗೆ ಈ ಬರಗಾಲದ ಬಗ್ಗೆ ಸೀರಿಯಸ್‌ನೆಸ್ ಎಂಬುದು ಇಲ್ಲವಾಗಿದೆ.

ರಾಜ್ಯದಲ್ಲಿ ತಲೆದೋರಿರುವ ಭೀಕರ ಬರಗಾಲದ ಬಗ್ಗೆ ಚರ್ಚೆ (ಮುಂದುವರಿದುದು)

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಆಗಲೇ ಹೇಳುತ್ತಿದ್ದೆ. ಯಾವುದೇ ರಾಜ್ಯದಲ್ಲಿ ವಿರೋಧಿ ಪಕ್ಷದ ಸದಸ್ಯರ ಅಧ್ಯಕ್ಷತೆಯಲ್ಲಿ ಬರಗಾಲದ ವಿಚಾರದಲ್ಲಿ ವರದಿ ಕೊಡಲಿಕ್ಕೆ ಸಮಿತಿಯನ್ನು ನೇಮಕಮಾಡಿದ ಉದಾಹರಣೆ ಇಲ್ಲ. ಆ ಒಂದು ಸಂಪ್ರದಾಯವನ್ನು ನಾವು ಹಾಕಿದ್ದೇವೆ. ಮಾನ್ಯ ಖರ್ಗೆಯವರು ವರದಿಯಲ್ಲಿ ಏನೇನು ಹೇಳಿದ್ದಾರೋ ಅದನ್ನೆಲ್ಲಾ ಜಾರಿಗೆ ಕೊಟ್ಟಿದ್ದೇವೆ. ಇನ್ನೊಂದು ವಿಚಾರವನ್ನು ಹೇಳಬೇಕಾಗುತ್ತದೆ. ಪದೇ ಪದೇ ಬರಗಾಲಕ್ಕೆ ಬಂದ ಹಣ, ಕೇಂದ್ರ ಸರ್ಕಾರದಿಂದ ಬಂದ ಹಣ, ಕೇಂದ್ರ ಸರ್ಕಾರ ಕೊಟ್ಟ ಹಣವನ್ನು ಏನು ಮಾಡಿದಿರಿ ಎಂದು ಕೇಳುತ್ತಾರೆ. ನನಗೆ ಆಶ್ಚರ್ಯವಾಗುತ್ತಿದೆ. ಈ ವಿಚಾರದಲ್ಲಿ ನಾನು ಅನೇಕ ಸಲ ಹೇಳಿದ್ದೇನೆ. ನಮಗೆ ಕೇಂದ್ರಸರ್ಕಾರದಿಂದ ಬರತಕ್ಕಂಥ ಹಣ ಏನಿದೆ ಅದು ದಾನವಾಗಿ ಬರುತ್ತಾ ಇಲ್ಲ, ಇದು ನಮ್ಮ ಪಾಲು, ಯೋಜನೆಯಲ್ಲಿ ಬರತಕ್ಕಂಥ ಹಣವನ್ನು ಮುಂಗಡವಾಗಿ ಕೊಡತಕ್ಕಂಥ ವ್ಯವಸ್ಥೆ. ಅಡ್ವಾನ್ಸ್ ಪ್ಲಾನ್ ಅಸಿಸ್ಟೆನ್ಸ್ ಕೇಂದ್ರದಿಂದ ಬರತಕ್ಕಂಥ ಹಣ ಏನಿದೆ ಇದು ನಮ್ಮದೇ ಹಣ. ಮುಂಗಡವಾಗಿ ಕೊಡತಕ್ಕಂಥಾದ್ದರ ಬಗ್ಗೆ ನಮಗೆ ಕೇಳತಕ್ಕಂಥ ಹಕ್ಕು ಇದೆ. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದ್ದಂತೆ ಸರ್ಕಾರದ ಆಜ್ಞೆ